# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತನಾಲ್ಕನೆಯ ಅಧಿವೇಶನ

## ಕಾರ್ಯಕಲಾಪಗಳ ಪಟ್ಟಿ

**ಶುಕ್ರವಾರ, ದಿನಾಂಕ: 23ನೇ ಫೆಬ್ರವರಿ, 2018**
**(ಸಮಯ: ಬೆಳಗ್ಗೆ: 10.00 ಗಂಟೆಗೆ)**

* * *

### 01. ಪ್ರಶ್ನೋತ್ತರ

ಅ. ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

ಆ. ತಡೆಹಿಡಿಯಲಾದ ಪ್ರಶ್ನೆ:

ನಾಲ್ಕನೆಯ ಪಟ್ಟಿಯಿಂದ ತಡೆಹಿಡಿಯಲಾದ **ಶ್ರೀ ಎಸ್.ವ್ಹಿ. ಸಂಕನೂರ** ಅವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: **58(303)** : **ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಕ್ಫ್** ಸಚಿವರು

ಇ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂಭತ್ತನೆಯ ಪಟ್ಟಿ

### 02. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

(ಮಾನ್ಯ ಸದಸ್ಯರುಗಳಿಗೆ ಈಗಾಗಲೇ ಒದಗಿಸಲಾಗಿರುವ **ಮೂರನೆಯ ಹಾಗೂ ನಾಲ್ಕನೆಯ** ಪಟ್ಟಿಯ ರೀತ್ಯಾ)

### 03. ವರದಿಗಳನ್ನೊಪ್ಪಿಸುವುದು

ಅ) **ಶ್ರೀ ಎನ್.ಎಸ್. ಬೋಸ್‌ರಾಜು (ಅಧ್ಯಕ್ಷರು, ಹಕ್ಕುಬಾಧ್ಯತಾ ಸಮಿತಿ)** ಅವರು 2016-2017ನೇ ಸಾಲಿನ ಹಕ್ಕುಬಾಧ್ಯತಾ ಸಮಿತಿಯ **93ನೇ** ವರದಿಯನ್ನು ಒಪ್ಪಿಸುವುದು:

ಆ) **ಶ್ರೀ ವಿ. ಸೋಮಣ್ಣ (ಸದಸ್ಯರು, ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ**) ಅವರು 2016-2017 ಹಾಗೂ 2017-2018ನೇ ಸಾಲಿನ ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ **11ನೇ** ವರದಿಯನ್ನು ಒಪ್ಪಿಸುವುದು:

ಇ) **ಶ್ರೀ ವಿವೇಕ್‌ರಾವ್ ವಸಂತ್‌ರಾವ್ ಪಾಟೀಲ್** (ಸದಸ್ಯರು, ಸಭೆಯ ಮುಂದಿಡಲಾದ ಕಾಗದ **ಪತ್ರಗಳ ಸಮಿತಿ**) ಅವರು 2016-17ನೇ ಸಾಲಿನ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ **33ನೇ** ವರದಿಯನ್ನು ಒಪ್ಪಿಸುವುದು;

ಈ) **ಶ್ರೀ ಎಂ.ಕೆ. ಪ್ರಾಣೇಶ್ (ಸದಸ್ಯರು, ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ ಸಮಿತಿ)** ಅವರು 2016-17ನೇ ಸಾಲಿನ ಸ್ಥಳೀಯ ಸಂಸ್ಥೆಗಳ ಮತ್ತು ಪಂಚಾಯತ್‌ರಾಜ್ ಸಂಸ್ಥೆಗಳ **26ನೇ** ವರದಿಯನ್ನು ಒಪ್ಪಿಸುವುದು;

ಉ) **ಶ್ರೀ ಪ್ರದೀಪ್ ಶೆಟ್ಟರ್ (ಸದಸ್ಯರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ)** ಅವರು 2017-18ನೇ ಸಾಲಿನ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿಯ **9ನೇ** ವರದಿಯನ್ನು ಒಪ್ಪಿಸುವುದು;

## 04. ಶಾಸನ ರಚನೆ

### ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

**01. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2018**

**ಶ್ರೀ ಹೆಚ್. ಆಂಜನೇಯ** (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು) ಅವರು:-

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ "**ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ**"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**02. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018**

**ಶ್ರೀ ಟಿ.ಬಿ. ಜಯಚಂದ್ರ** (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಸಣ್ಣ ನೀರಾವರಿ ಸಚಿವರು) ಅವರು:-

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ "**ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ**"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**03. ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2017**

**ಶ್ರೀ ಕೆ.ಆರ್. ರಮೇಶ್‌ಕುಮಾರ್** (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) ಅವರು:-

ಅ) ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ 2018ನೇ ಸಾಲಿನ "**ಅಂತರ್-ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ**"ವನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

## 05. ವಿತ್ತೀಯ ಕಾರ್ಯಕಲಾಪ

2018-2019ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲಿನ ಸಾಮಾನ್ಯ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ.

## 06. ಗಮನ ಸೆಳೆಯುವ ಸೂಚನೆಗಳು

ಅ) **ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ** ಅವರು, ಡಾ. ಎಂ.ಎಸ್. ಸ್ವಾಮಿನಾಥನ್ ಆಯೋಗದ ವರದಿಯನ್ನು ಜಾರಿಗೊಳಿಸುವುದರೊಂದಿಗೆ ರಾಜ್ಯದ ರೈತರಿಗೆ ಬೆಂಬಲ ಬೆಲೆ ನೀಡುವ ಬಗ್ಗೆ **ಮಾನ್ಯ ಕೃಷಿ** ಸಚಿವರ ಗಮನ ಸೆಳೆಯುವುದು.

ಆ) **ಶ್ರೀ ಐವನ್ ಡಿ'ಸೋಜಾ** ಅವರು, ರಾಜ್ಯದಲ್ಲಿರುವ ಅಡಿಕೆ ಬೆಳೆಗಾರರ ಸಮಸ್ಯೆಗಳಿಗೆ ಹಾಗೂ ಅಡಿಕೆ ಬೆಳೆಗೆ ಆಗುವ ತೊಂದರೆಗಳಿಗೆ ಅಡಿಕೆ ಬೆಳೆಗಾರರ ಮಂಡಳಿಯನ್ನು ರಚಿಸುವ ಬಗ್ಗೆ **ಮಾನ್ಯ ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ** ಸಚಿವರ ಗಮನ ಸೆಳೆಯುವುದು.

ಇ) **ಶ್ರೀ ಎನ್. ಅಪ್ಪಾಜಿಗೌಡ** ಅವರು, ಕರ್ನಾಟಕ ಲೋಕಸೇವಾ ಆಯೋಗದವರು ನಡೆಸುವ ಕನ್ನಡ ಕಡ್ಡಾಯ ಪರೀಕ್ಷೆಯಲ್ಲಿ ಕನ್ನಡವನ್ನು ತೃತೀಯ ಭಾಷೆಯನ್ನಾಗಿ ತೆಗೆದುಕೊಂಡಂತಹ ಅಭ್ಯರ್ಥಿಗಳಿಗೆ ಕನ್ನಡದ ಕಡ್ಡಾಯ ಪರೀಕ್ಷೆಯಿಂದ ವಿನಾಯಿತಿ ನೀಡುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರು ಹಾಗೂ ಹಣಕಾಸು** ಸಚಿವರ ಗಮನ ಸೆಳೆಯುವುದು.

## 07. ನಿಯಮ 330ರ ಮೇರೆಗೆ

ಅ) **ಶ್ರೀಮತಿ ಮೋಟಮ್ಮ** ಅವರು, ಚಿಕ್ಕಮಗಳೂರು ತಾಲ್ಲೂಕು ಅಂಬಳೆ ಹೋಬಳಿ ಗ್ರಾಮಗಳಿಗೆ ಮಳಲೂರು ಏತ ನೀರಾವರಿ ಯೋಜನೆ ಮೂಲಕ ಕುಡಿಯುವ ನೀರಿನ ಸೌಕರ್ಯ ಒದಗಿಸುವುದು ಹಾಗೂ ಜಮೀನು ನೀಡಿದವರಿಗೆ ಸೂಕ್ತ ಪರಿಹಾರ ನೀಡುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು)**

ಆ) **ಶ್ರೀ ಪ್ರದೀಪ್ ಶೆಟ್ಟರ್** ಅವರು, ಬೆಂಗಳೂರಿನ ಇಂದಿರಾನಗರದಲ್ಲಿರುವ ಸರ್ಕಾರಿ ಕಿವುಡ ಮತ್ತು ಮೂಕ ಮಕ್ಕಳ ವಿಶೇಷ ಶಾಲೆಯಲ್ಲಿ ಸೇವೆ ಸಲ್ಲಿಸಿ, ನಿವೃತ್ತಿ ಹೊಂದಿರುವ ಶಿಕ್ಷಕರುಗಳಿಗೆ ಪಿಂಚಣಿ ಸೌಲಭ್ಯ ಒದಗಿಸುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು)**

....4

## ೦೮. ನಿಯಮ ೬೮ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಚರ್ಚೆ

| ಶ್ರೀಯುತರುಗಳಾದ: | |
|---|---|
| **ಅರುಣ ಶಹಾಪುರ**<br>**ಪುಟ್ಟಣ್ಣ**<br>**ಎಸ್.ವ್ಹಿ. ಸಂಕನೂರ**<br>**ಅಮರನಾಥ ಪಾಟೀಲ್** | ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸ್ಕೂಲ್ ಜಿ. ಲಿಂಕ್ ಪ್ರೈವೇಟ್ ಲಿಮಿಟೆಡ್ ಖಾಸಗಿ ಕಂಪನಿಯ ಜೊತೆ ಎಂ.ಓ.ಯು. ಸಹಿ ಮಾಡಿದ್ದು, ಶಿಕ್ಷಕರ-ವಿದ್ಯಾರ್ಥಿ(ಪಾಲಕರು) ಮಾಹಿತಿ ದತ್ತಾಂಶ ಹಂಚಿಕೊಳ್ಳುವುದರ ದುಷ್ಪರಿಣಾಮ, ಖಾಸಗಿ ಸಂಸ್ಥೆಗಳ ಜೊತೆಗೆ ದತ್ತಾಂಶ ಹಂಚಿಕೆ ಮಾಹಿತಿ ತಂತ್ರಜ್ಞಾನ ಕಾಯ್ದೆ ೨೦೦೦ದ ಉಲ್ಲಂಘನೆಯ ಆರೋಪದ ಬಗ್ಗೆ. |

## ೦೯. ಸದಸ್ಯರ ಖಾಸಗಿ ಕಾರ್ಯಕಲಾಪ

**ಖಾಸಗಿ ವಿಧೇಯಕ ಮಂಡನೆ**

**ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ, 2017:-**

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ** (ವಿಧಾನ ಪರಿಷತ್ತಿನ ಮಾನ್ಯ ಸದಸ್ಯರು) ಅವರು:-

ಅ) 2017ನೇ ಸಾಲಿನ "**ಕರ್ನಾಟಕ ಅಸಲು ಹಣಕ್ಕಿಂತ ಹೆಚ್ಚು ಬಡ್ಡಿ ವಿಧಿಸುವಿಕೆ ನಿಷೇಧ ಅಧಿನಿಯಮ**"ವನ್ನು ಮಂಡಿಸಬೇಕೆಂದು ಸೂಚಿಸುವುದು;

ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ(ಪ್ರ)**

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.
**www.kla.kar.nic.in/council.htm**